**INDIAN JOURNAL OF HISTORY AND ARCHAEOLOGY**
**ISSN (e):2582-225Xwww.ijha.in**
**Vol-7, Issue -6, November-December, 2025**
**Page No,98-103**
**Peer -Reviewed, Refereed Journal**

# ಕೊಳ್ಳೇಗಾಲ ಪ್ರದೇಶದ ಶಾಸನಗಳಲ್ಲಿ ಶೈವ ಧರ್ಮದ ಪ್ರಭಾವ

***.ಶಿವಶಂಕರ್.ಎಸ್.[1]**
****.ಪ್ರೊ.ಜಿ.ಟಿ.ಸೋಮಶೇಖರ್.[2]**

ಪ್ರಾಚೀನ ಕರ್ನಾಟಕದಲ್ಲಿನ ಧಾರ್ಮಿಕ ಜೀವನವನ್ನು ನಾವು ಗಮನಿಸಿದಾಗ; ಹಿಂದಿನಿಂದಲೂ ಹಲವರು ಧರ್ಮಗಳು ಬೆಳೆದು ಬಂದಿವೆ. ಇಲ್ಲಿಯ ಜನತೆಯ ಧಾರ್ಮಿಕ ಶ್ರದ್ಧೆ, ಸಮನ್ವಯತೆ, ಔದಾರ್ಯ ಹಾಗೂ ಇಲ್ಲಿನ ವಾತಾವರಣ ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಹಾಗೂ ಧರ್ಮಗಳನ್ನು ಆಕರ್ಷಿಸುತ್ತಿತ್ತು. ಸಾಮಾನ್ಯವಾಗಿ ಭಾರತದ ಧಾರ್ಮಿಕ ಪರಿಸ್ಥಿತಿಯ ಬೆಳವಣಿಗೆಯನ್ನು ಗಮನಿಸಿದಾಗ ವೈದಿಕ ಧರ್ಮವನ್ನೇ ಅತ್ಯಂತ ಪ್ರಾಚೀನ ಧರ್ಮವೆಂದು ತಿಳಿಯುತ್ತದೆ. ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ಹಲವಾರು ದೇವತಾ ಆಕೃತಿಗಳು ನಿರ್ದಿಷ್ಟ ಧರ್ಮ ಒಂದನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಲಾದರೂ ಅದರಲ್ಲಿ ಸ್ಪಷ್ಟತೆ ಇಲ್ಲ. ಹೀಗಾಗಿ ವಿಭಿನ್ನ ಧಾರ್ಮಿಕ ಪಂಥಗಳು ವೈದಿಕ ಯುಗದಿಂದಲೇ ಬೆಳೆದವು. ವೈಷ್ಣವ, ಶೈವ, ಬೌದ್ಧ, ಜೈನ ಮತ್ತು ಶಾಕ್ತ ಹೀಗೆ ಇವುಗಳು ಅತ್ಯಂತ ಪ್ರಾಚೀನ ಆಚರಣೆಗಳು ಮತ್ತು ನಂಬಿಕೆಗಳಾಗಿವೆ. ಸರಿಸುಮಾರು ಕ್ರಿ.ಪೂ. 6ನೇ ಮತ್ತು 5ನೇ ಶತಮಾನದಲ್ಲಿ ಉದಯವಾದ ಜೈನ ಮತ್ತು ಬೌದ್ಧಧರ್ಮಗಳು ದೇಶದ ಮತ್ತು ಕರ್ನಾಟಕದ ಧಾರ್ಮಿಕ ಸಾಂಸ್ಕೃತಿಕ ಇತಿಹಾಸದಲ್ಲಿ ತಮ್ಮದೇ ಆದಂತಹ ಸ್ಥಾನಮಾನವನ್ನು ಪಡೆದುಕೊಂಡು ಬೆಳವಣಿಗೆ ಹೊಂದಿದ್ದವು. ಇದರೊಟ್ಟಿಗೆ ಪ್ರಾಂತೀಯವಾಗಿ 12ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಹೆಚ್ಚು ಪ್ರಸಿದ್ಧಿಗೊಂಡ ವಚನ ಚಳವಳಿಯ ಮೂಲಕ ಶರಣರ ಧಾರ್ಮಿಕ ಪರಂಪರೆಯು ಸಮಾನತೆ ಮತ್ತು ಕಾಯಕ ಪ್ರಜ್ಞೆಯು ಪ್ರಬುದ್ಧ ಮಾನಕ್ಕೆ ಬಂದಿರುತ್ತದೆ.

ಧರ್ಮವು ಸಮಾಜದ ಒಂದು ಅವಿಭಾಜ್ಯ ಅಂಗವಾಗಿದೆ. ಧರ್ಮಕ್ಕೆ ಸಮಾಜದಲ್ಲಿ ತನ್ನದೇ ಆದ ಐತಿಹಾಸಿಕ ಪರಂಪರೆಯಿದೆ. ಕನ್ನಡ ನಾಡಿನಲ್ಲಿ ಪ್ರಚಲಿತವಾಗಿದ್ದಷ್ಟು ಧರ್ಮಗಳು ವಿಶ್ವದ ಯಾವ ಭಾಗದಲ್ಲೂ ಇರಲಿಲ್ಲ. ಕನ್ನಡ ನಾಡಿನ ರಾಜಮಹಾರಾಜರುಗಳು ಅಪಾರ ಪ್ರೋತ್ಸಾಹ ನೀಡಿ ಧಾರ್ಮಿಕ

[1]. ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು.
[2] .ಪ್ರಾಧ್ಯಾಪಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ .ಮಾನಸ ಗಂಗೋತ್ರಿ,ಮೈಸೂರು.

ಆಚರಣೆಗಳನ್ನು ಬೆಳೆಸಿದ್ದಾರೆ. ಕನ್ನಡಿಗರ ವಿಶಾಲವಾದ ಧಾರ್ಮಿಕ ಮನೋಭಾವದ ಕಾರಣದಿಂದಲೇ ಹಲವಾರು ಧರ್ಮಗಳು ಹೊರಗಿನಿಂದ ಬಂದು ಆಶ್ರಯ ಪಡೆದುಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿವೆ, ಬೆಳೆಸಿವೆ. ಈ ಕಾರ್ಯಕ್ಕೆ ರಾಜರುಗಳು, ಪ್ರಜೆಗಳು ತುಂಬು ಮನದಿಂದ ಸಹಾಯ ಸಹಕಾರಗಳನ್ನು ನೀಡಿರುವ ಅಂಶಗಳನ್ನು ಶಾಸನಗಳು ದಾಖಲಿಸಿವೆ.

ಕನ್ನಡ ನಾಡಿನ ಜನರಲ್ಲಿ ಹಾಸುಹೊಕ್ಕಾಗಿರುವ ಧಾರ್ಮಿಕ ಸಂಸ್ಕೃತಿ, ಜೈನ, ಬೌದ್ಧ, ಶೈವ, ವೀರಶೈವ, ವೈಷ್ಣವ ಧರ್ಮಗಳಲ್ಲದೇ ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳೂ ಈ ನೆಲದಲ್ಲಿ ಬದುಕಿವೆ. ಪ್ರಾಚೀನ ಕಾಲದಲ್ಲಿ ರಾಜರುಗಳು ತಾವು ಯಾವ ಧರ್ಮವನ್ನೇ ಪರಿಪಾಲಿಸುತ್ತಿದ್ದರೂ ಕೂಡ ಅನ್ಯಧರ್ಮಗಳಿಗೆ ಉದಾರವಾದ ಕೊಡುಗೆಯನ್ನು, ದಾನದತ್ತಿ ನೀಡಿ ಪ್ರೋತ್ಸಾಹಿಸಿದ್ದಾರೆ. ಈ ಕಾರ್ಯಕ್ಕೆ ರಾಜಮಹಾರಾಜರು ಮತ್ತು ಸಾಮಾನ್ಯ ಪ್ರಜಾ ವರ್ಗದವರು, ತುಂಬುಮನದಿಂದ ಸಹಾಯ ಸಹಕಾರಗಳನ್ನು ನೀಡಿರುವ ಅಂಶಗಳನ್ನು ಶಾಸನಗಳು ಸಾರುತ್ತಿವೆ. ಕೊಳ್ಳೇಗಾಲ ಪ್ರದೇಶದಲ್ಲಿ ಜೈನ, ಶೈವ ಮತ್ತು ವೈಷ್ಣವ ಧರ್ಮಗಳು ಪ್ರಾಚೀನ ಕಾಲದಲ್ಲಿ ರಾಜಾಶ್ರಯವನ್ನು ಪಡೆದಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂಲೇ ಪ್ರಸ್ತುತ ಶೈವ ಧರ್ಮದ ಪ್ರಭಾವ ಕುರಿತು ಶಾಸನಗಳಲ್ಲಿ ದೊರೆತ ಮಾಹಿತಿಯನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

**ಶೈವ ಧರ್ಮ:**

ಶೈವ ಧರ್ಮವು ಬಹು ಪ್ರಾಚೀನವಾದ ಧರ್ಮ. ಅದರ ಇತಿಹಾಸವು ವೇದಗಳ ಕಾಲಕ್ಕಿಂತಲೂ ಹಿಂದಕ್ಕೆ ಹೋಗುತ್ತದೆಂದು ವಿದ್ವಾಂಸರ ಅಭಿಪ್ರಾಯ. ಸಿಂಧೂ ನಾಗರೀಕತೆಯ ನಿವೇಶನಗಳ ಉತ್ಖನನದಲ್ಲಿ ದೊರೆತಿರುವ ಅವಶೇಷಗಳಲ್ಲಿ ಕೆಲವು ವಿಶಿಷ್ಟ ಮುದ್ರೆಗಳು ಉಲ್ಲೇಖನೀಯ. ಅವುಗಳಲ್ಲಿ ಅತೀ ಪ್ರಸಿದ್ಧವಾದುದೆಂದರೆ 'ಪಶುಪತಿ' ಮುದ್ರೆ. ಈ ಮುದ್ರೆಯಲ್ಲಿ ಚಿಕ್ಕ ಮೇಜಿನ ಮೇಲೆ ಊರ್ಧ್ವಲಿಂಗಿಯಾಗಿ ಯೋಗಿಯಂತೆ ಕುಳಿತಿರುವ ಮೈತುಂಬ ಆಭರಣ ಧರಿಸಿದ ದೇವತೆಯಿದ್ದು ತಲೆಯ ಮೇಲೆ ತ್ರಿಶೂಲದಂತೆ ಕಾಣುವ ಕೊಂಬಿನ ಕಿರೀಟವಿದೆ. ದೇವತೆಯ ಸುತ್ತಲೂ ಹುಲಿ, ಆನೆ, ಖಡ್ಗಮೃಗ ಮತ್ತು ಕೋಣ ಚಿತ್ರಗಳಿದ್ದು ಬಹುಶಃ ಮನುಷ್ಯನ ಚಿತ್ರವೂ ಇದೆ. ಮೇಲೆ ಮತ್ತು ಕೆಳಗಡೆ ಜಿಂಕೆಗಳನ್ನು ಚಿತ್ರಿಸಿದೆ. ಪಶುಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಇವನನ್ನು ಪಶುಪತಿ ಎಂದು ಗುರುತಿಸುವ ಪ್ರಯತ್ನವಾಗಿದೆ. ನಂತರದಲ್ಲಿ ಸಾಹಿತ್ಯಿಕ ಪುರಾವೆಗಳ ಪ್ರಕಾರ ಪಶುಪತಿ ಎಂಬುದು ಶಿವನ ಒಂದು ಹೆಸರು ಎಂಬುದು ಸ್ಪಷ್ಟವಾಗುತ್ತದೆ.

ಪ್ರಾಚೀನ ಕಾಲದಿಂದಲೂ ಶೈವ ಧರ್ಮ ಭಾರತದಲ್ಲಿ ಬಹಳ ಮಹತ್ವದ ಧರ್ಮವಾಗಿ ಬೆಳೆದುಬಂದಿದೆ. ಪ್ರಾಚೀನ ಕಾಲದಿಂದ ಇರುವ ಶೈವ ಧರ್ಮವು ಅನೇಕ ಪಂಥಗಳಿಂದ ಕೂಡಿದೆ. ಅವುಗಳು ಪಾಶುಪಥ ಪಂಥ, ಲಾಕುಳೀಶ ಪಂಥ, ಕಾಪಾಲಿಕ ಪಂಥ, ತಮಿಳುನಾಡಿನ ಶೈವರ ಪಂಥ,

ಕಾಳಾಮುಖ ಪಂಥ, ವೀರಶೈವ ಪಂಥ ಪ್ರಮುಖವಾದವುಗಳು. ಕೊಳ್ಳೇಗಾಲ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ವಿವಿಧ ಅರಸು ಮನೆತನಗಳು ಮತ್ತು ಜನಸಾಮಾನ್ಯರು, ಶೈವಧರ್ಮವನ್ನು ಪೋಷಿಸಿ ಪೂಜಿಸಿ ಶೈವ ದೇವಾಲಯಗಳನ್ನು ನಿರ್ಮಿಸಿ, ದಾನದತ್ತಿಯನ್ನು ನೀಡಿರುವ ವಿವರಗಳನ್ನು ಈ ಪ್ರದೇಶದ ಶಾಸನಗಳು ಸಾರುತ್ತವೆ. ಶೈವ ಧರ್ಮದ ಬಗ್ಗೆ ಒಟ್ಟು 21 ಶಾಸನಗಳು ಮಾಹಿತಿಯನ್ನು ತಿಳಿಸುತ್ತವೆ. ಶಾಸನಗಳ ಆರಂಭದ ಭಾಗದಲ್ಲಿ ಶೈವ ಧರ್ಮದ ವಿಚಾರವಾಗಿ ಶಿವನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ. ಸರಗೂರಿನ ಕ್ರಿ.ಶ.9ನೇ ಶತಮಾನದ ಶಾಸನವು ಮಲ್ಲಿಕಾರ್ಜುನ ದೇವರಿಗೆ ಕೆರೆಯನ್ನು ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ.

ಕುಂತೂರಿನ ಕ್ರಿ.ಶ.10ನೇ ಶತಮಾನದ ಗಂಗರ ಕಾಲದ ಶಾಸನವು ಕುಂತೂರಿನ ಮಹದೇವ ದೇವಾಲಯಕ್ಕೆ ಮತ್ತು ಲಿಂಗಮಹೇಶ್ವರ ದೇವಾಲಯಗಳಿಗೆ ಭೂಮಿಯನ್ನು ದಾನ ಮಾಡಿರುವ ವಿಷಯ ತಿಳಿಸುತ್ತದೆ. ಶ್ಯಾಗಂನ ಕ್ರಿ.ಶ.1045–46ರ ಶಾಸನವು ಒಂದನೇ ರಾಜಾಧಿರಾಜನ ಅಧಿಕಾರಿಗಳಾದ ರಾಜೇಂದ್ರಚೋಳ ಗಾವುಂಡನ ಆಜ್ಞೆಯ ಮೇರೆಗೆ ಕರೈಕಂಡಯಾನ್ ಎಂಬುವನು ಮಹದೇವ ದೇವರಿಗೆ ಭೂಮಿಯನ್ನು ಮತ್ತು ಒಂದು ಕೊಳಗ ಬೀಜವನ್ನು ದಾನ ಮಾಡಿದನೆಂದು ಉಲ್ಲೇಖಿಸುತ್ತದೆ. ಮುಡಿಗೊಂಡದ ಕ್ರಿ.ಶ.11ನೇ ಶತಮಾನದ ಶಾಸನದಲ್ಲಿ ನಂಬಿರಾಟಿಯಾರ್ ಮತ್ತು ವಿಟಂಕ ದೇವರಿಗೆ ನೈವೇದ್ಯಕ್ಕೆ ಎರಡು ನಾಳಿ ಭತ್ತ ಮತ್ತು ಅಕ್ಕಿಯನ್ನು ದಾನ ಮಾಡಿರುವ ವಿವರವಿದೆ. ಮುಡಿಗೊಂಡದ ಕ್ರಿ.ಶ.11ನೇ ಶತಮಾನದ ಎರಡು ಶಾಸನಗಳು ದೇಶಿ ವಿಟಂಕ ದೇವರಿಗೆ ಆಭರಣಕ್ಕಾಗಿ ಮತ್ತು ಮುಂಜಾನೆ ಹಾಗೂ ಮಧ್ಯಾಹ್ನದ ಸಮಯದಲ್ಲಿ ದೀಪ ಬೆಳಗಿಸಲು ಮತ್ತು ನೈವೇದ್ಯಕ್ಕೆಂದು ಭತ್ತವನ್ನು ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ. ಮುಡಿಗೊಂಡದ ಕ್ರಿ.ಶ.11ನೇ ಶತಮಾನದ ಮತ್ತೊಂದು ಶಾಸನವು ಮುಡಿಗೊಂಡ ಚೋಳೇಶ್ವರ ದೇವಾಲಯಕ್ಕೆ ಭತ್ತ ಮತ್ತು ಶೋಳಮಂಡಲದಲ್ಲಿ ಇದ್ದಂತಹ ರಾಜಕೇಸರಿ ಭೂಮಿಯನ್ನು ಹೊಯ್ಸಳ ಅರಸ ನೀಡಿದನೆಂದು ವಿವರಿಸುತ್ತದೆ. ಮತ್ತು ಅಜ್ಜಿಪುರದ ಕ್ರಿ.ಶ.12ನೇ ಶತಮಾನದ ಶಾಸನವು ಆದಿಗಾವುಂಡನ ಮಗ ದೇನನು ಗದ್ದೆಯನ್ನು ಇಲ್ಲೇಮೇಶ್ವರ ದೇವರಿಗೆ ನೀಡಿದ್ದಾನೆ ಎಂದು ತಿಳಿಸುತ್ತದೆ. ಶಿವನಸಮುದ್ರದ ಕ್ರಿ.ಶ.12ನೇ ಶತಮಾನದ ಶಾಸನದಲ್ಲಿ ಉಲಗಮುಂಡೇಶ್ವರ ದೇವರಿಗೆ ದೇಶಿನಾಯಕನು ಶಾಶ್ವತವಾಗಿ ದೀಪ ಬೆಳಗಿಸಲು ಮೂರು ಹೊನ್ನನ್ನು ದಾನ ಮಾಡಿದ್ದಾನೆ. ಮುಡಿಗೊಂಡದ ಕ್ರಿ.ಶ.1250ರ ಶಾಸನದಲ್ಲಿ ಶಿವ ದೇವಾಲಯಕ್ಕೆ ಸೇರಿದ ಭೂಮಿಯನ್ನು ಅಯ್ಯಪಿಳ್ಳೆಗೆ ಮಾರಾಟ ಮಾಡಿದರೆಂದು ಉಲ್ಲೇಖವಿದೆ. ಮುಡಿಗೊಂಡದ ಕ್ರಿ.ಶ.13ನೇ ಶತಮಾನದ ಮುಡಿಗೊಂಡೇಶ್ವರ ದೇವಾಲಯದಲ್ಲಿ ದೇವಕರ್ಮಿಗಳಿದ್ದರೆಂದು ಹೇಳಿದೆ. ಮೋಡಳ್ಳಿಯ ಮಲ್ಲಿಕಾರ್ಜುನ ದೇವಾಲಯಕ್ಕೆ ಸೇರಿದ ಗ್ರಾಮಗಳು ಶಿಥಿಲವಾಗಿದ್ದು ಅವುಗಳನ್ನು ಅಚ್ಯುತರಾಯ ಅಧಿಕಾರಿ ಮಾದಪ್ಪಯ್ಯನು ಜೀರ್ಣೋದ್ಧಾರ ಮಾಡಿದರೆಂದು ಕಾಮಗೆರೆಯ ಕ್ರಿ.ಶ.1535ರ ಶಾಸನ

ಹೇಳುತ್ತದೆ. ಸೂಲವಾಡಿಯಲ್ಲಿ ದೊರೆತ ಕ್ರಿ.ಶ.1580ರ ಶಾಸನದ ಪ್ರಕಾರ ಪಾಲೆನಾಯಕರಿಗೆ ಪುಣ್ಯವಾಗಬೇಕೆಂದು ತಮ್ಮಡಿಮಾರಯ್ಯನ ಮಗನಾದ ಅಚಯ್ಯನು ಬ್ರಹ್ಮದೇವರ ಗುಡಿಯನ್ನು ನಿರ್ಮಿಸಿದ್ದಾನೆ.

ಗುಂಡೇಗಾಲದ ಕ್ರಿ.ಶ.1585ರ ಶಾಸನದಲ್ಲಿ ಗುಂಡಸಾಗರದ ಅಮೃತೇಶ್ವರ ದೇವಾಲಯವು ಶಿಥಿಲವಾಗಿದ್ದು, ಅದನ್ನು ಜೀರ್ಣೋದ್ಧಾರ ಮಾಡಲು ಹದಿನಾಡ ಸೀಮೆಯ ಪ್ರಭು ರಾಮರಾಜನಾಯಕ ಭೂಮಿಯನ್ನು ದಾನ ಮಾಡಿರುವ ವಿಷಯವಿದೆ. ಸತ್ಯಗಾಲದ ಕ್ರಿ.ಶ.1720ರ ಶಾಸನವು ಮೈಸೂರು ಒಡೆಯ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಯಳಂದೂರು ಪ್ರಭುವಾದ ಲಿಂಗರಾಜ ಒಡೆಯನ ಮಗ ಚಾಮರಾಜ ಒಡೆಯರು ದೇವಾಲಯ ನಿರ್ಮಿಸಿ ಪಂಚಲಿಂಗವನ್ನು ಸ್ಥಾಪಿಸಿ, ದೇವರ ಪೂಜೆ ಮತ್ತು ನೈವೇದ್ಯಕ್ಕೆಂದು ಅರ್ಚಕನಿಗೆ ಭೂಮಿಯನ್ನು ದಾನ ಮಾಡಿದ್ದಾನೆ ಎಂದು ತಿಳಿಸುತ್ತದೆ. ಬಂಡಳ್ಳಿಯ ಕ್ರಿ.ಶ.1845–46ರ ಶಾಸನದಲ್ಲಿ ಚೋಳರ ಕಾಲದಲ್ಲಿ ನಿರ್ಮಿತನಾಗಿದ್ದ ಉಮಾಮಹೇಶ್ವರಿ ದೇವಾಲಯ ಮತ್ತು ವೀರಭದ್ರ ದೇವಸ್ಥಾನಗಳು ಹಾಗೂ ದೇವಾಲಯದ ಮಜ್ಜನಕ್ಕೆಂದು ಇದ್ದ ಬಾವಿಯು ಶಿಥಿಲವಾಗಿದ್ದರಿಂದ ಅದನ್ನು ಸಂಗಯ್ಯನ ಮಗ ಸಿಂಗಿಶೆಟ್ಟಿಯು ಜೀರ್ಣೋದ್ಧಾರ ಮಾಡಿಸಿದನೆಂದು ಉಲ್ಲೇಖವಿದೆ. ಶಿವನಸಮುದ್ರದ ಕ್ರಿ.ಶ.12–13ನೇ ಶತಮಾನದ ಶಾಸನವು ಉಲಗಮುಂಡೇಶ್ವರ, ತಿಲೈಆಲೇಶ್ವರ ಮತ್ತು ತಿಲೈಕ್ಕೂಟ್ಟವಿಟಂಕರ ದೇವರುಗಳ ದೇವಾಲಯಗಳನ್ನು ನಿರ್ಮಿಸಿರುವ ವಿಷಯದ ಪ್ರಸ್ತಾಪವಿದೆ. ಕ್ರಿ.ಶ.1760ರ ತಾಮ್ರಶಾಸನದಲ್ಲಿ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ ಎಂದಿದೆ. ಬಂಡಳ್ಳಿಯ ಕ್ರಿ.ಶ.1845ರ ಶಾಸನವು "ನಮಃ ಶಿವಾಯ" ಎಂದು ಪ್ರಾರಂಭವಾಗಿದೆ. ರಾಜಮಹಾರಾಜರು ಶೈವಧರ್ಮವನ್ನು ಆರಾಧಿಸುವುದರ ಕುರುಹುಗಳಾಗಿ ಶಿವನ ದೇವಾಲಯಗಳನ್ನು ನಿರ್ಮಿಸಿ ಆ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿರುವುದು ಗಮನೀಯವಾಗಿದೆ.ಶ್ಯಾಗಂನ ಕ್ರಿ.ಶ.19ನೇ ಶತಮಾನದ ಶಾಸನವು ಜಲಕಂಠೇಶ್ವರ ದೇವಾಲಯಕ್ಕೆ ನೆಲ್ಲೂರಿನ ಮರಿಗೌಡನ ಮಗ ದೇವಗೌಡನು ಬಾಗಿಲನ್ನು ಮಾಡಿಸಿದನೆಂದು ಹೇಳುತ್ತದೆ.

**ವೀರಶೈವ ಪಂಥ:**

ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಆ ಮೊದಲೇ ಇದ್ದ ವೀರಶೈವ ಧರ್ಮವನ್ನು ಬಸವಣ್ಣನವರು ಪುನರುಜ್ಜೀವನಗೊಳಿಸಿದರು. ಕೊಳ್ಳೇಗಾಲ ಪ್ರಾಂತ್ಯದಲ್ಲಿ ಈ ಧರ್ಮ ಇದ್ದು ರಾಜಾಶ್ರಯ ಪಡೆದುಕೊಂಡಿತು ವೀರಶೈವ ಪಂಥಗಳನ್ನು ಉಲ್ಲೇಖಿಸುತ್ತದೆ. ಒಟ್ಟು 12 ಶಾಸನಗಳಿವೆ. ಇವುಗಳಲ್ಲಿ ಉಲ್ಲೇಖಿತಗೊಂಡಿರುವ ಪ್ರಮುಖ ಮಠಗಳೆಂದರೆ ಕುಂತೂರಿನ ಮಹಾನಂದೀಶ್ವರ ಮಠ, ಶಿವನಸಮುದ್ರದ ವೀರೇಶ್ವರನ ಮಠ, ತಲಕಾಡಿನ ಪಂಚಮಠ, ಯರಗಂಬಳ್ಳಿಯ ಸಿಂಹಾಸನದ ನಿರಾಸಿಮಠ, ಹೊಂಡರಬಾಳಿನ ಮಹಾಮತ್ತಿನಮಠ ಪ್ರಮುಖವಾದವು. ಈ ಎಲ್ಲ ಮಠಗಳಿಗೆ ದಾನದತ್ತಿಯನ್ನು

ನೀಡಿರುವ ವಿಚಾರವನ್ನು ಶಾಸನಗಳು ಪ್ರಸ್ತಾಪಿಸುತ್ತವೆ. ಈ ಎಲ್ಲ ಮಠಗಳು ಫಲವತ್ತಾದ ಭೂಪ್ರದೇಶದಲ್ಲಿದ್ದು ಈ ಶಾಸನಗಳು ಇರುವುದು ಫಲವತ್ತಾದ ಪ್ರದೇಶದಲ್ಲೇ. ಹೀಗಾಗಿ ತಗರಪುರದ ಕ್ರಿ.ಶ.1308ರಶಾಸನ ರಾಜರಾಜಪುರ (ತಳಕಾಡು) ಪಂಚಮಠವಿತ್ತೆಂದು ತಿಳಿಸುತ್ತದೆ. ಕುಂತೂರಿನ ಕ್ರಿ.ಶ.1512ರಶಾಸನ ನಂದಿನಾಥ ಭೃಂಗಿನಾಥ ವೀರಭದ್ರದೇವರ ಮತ್ತು ಸಜ್ಜನಶುದ್ಧ ಶಿವಾಚಾರ ಸಂಪನ್ನರಾದ ದೇವಪೃಥ್ವಿ ಮಹಾಮತ್ತಿನ ಮಠಕ್ಕೆ ಸಾಲೂರು ಶಾಂತದೇವರು ಐವತ್ತು ಒಡೆಯರನ್ನು ಆರೋಗಣೆ ವಸ್ತ್ರವಾಗಿ ಕಪ್ಪಡದಿಂದ ಪೂಜೆ ಮಾಡಿ ಕೊಡಿಕೊಂಡದಕ್ಕಾಗಿ ಕುಂತೂರು ಗ್ರಾಮವನ್ನು ಕುಂತೂರಿನ ಮಹಾನಂದೀಶ್ವರ ಮಠಕ್ಕೆ ದಾನ ಮಾಡಿರುವ ವಿಷಯವನ್ನು ತಿಳಿಸುತ್ತದೆ. ಕುಂತೂರಿನ ಕ್ರಿ.ಶ.1539ರಶಾಸನದಲ್ಲಿ ಕುಂತೂರು ಸಿಂಹಾಸನದ ಮಹಮಹತ್ತಿನ ಮಠದಿಂದ ನಂಜೇದೇವರು ರಾಮಭಟ್ಟಯನಿಗೆ ಆಶೀರ್ವಾದ ಮಾಡಿದ್ದರಿಂದ ಮಠದಿಂದ ಪಡೆಯುತ್ತಿದ್ದ ತೆರಿಗೆಯನ್ನು ವಿನಾಯಿತಿ ನೀಡಿರುವ ವಿವರವಿದೆ. ಕುಂತೂರಿನ ಕ್ರಿ.ಶ.1544ರ ಮತ್ತೊಂದು ಶಾಸನದಲ್ಲಿ ಮಹಾನಂದೀಶ್ವರ ಮಠದಿಂದ ಕೊಡಲಾಗುತ್ತಿದ್ದು ಸುಂಕವನ್ನು ನಾರಪ್ಪರಾಜಯ್ಯನ ಅಧಿಕಾರಿ ಕಂಪರಾಯಣ್ಣನು ಮಾನ್ಯ ಮಾಡಿದನೆಂದು ಉಲ್ಲೇಖವಿದೆ. ಕೆಂಪನಪಾಳ್ಯದ ಕ್ರಿ.ಶ.1544ರ ಶಾಸನವು ಯರಗಂಬಳ್ಳಿಯ ಸಿಂಹಾಸನದ ನಿರಾಸಿಮಠಕ್ಕೆ ಮುಡಿಗೊಂಡ ಸ್ಥಳದ ಜಕ್ಕಹಳ್ಳಿ ಅದರ ಒಳಗಾದ ಬೋಗರಪುರ ನಾಗಿದೇವಪುರವನ್ನು ನಾರಪ್ಪರಾಜಯ್ಯನ ಅಧಿಕಾರಿ ವೋಬ್ಬರಸಯ್ಯ ದಾನ ಮಾಡಿದರೆಂದು ತಿಳಿಸುತ್ತದೆ. ಹೊಂಡರಬಾಳಿನ ಕ್ರಿ.ಶ.1549ರ ಶಾಸನದಲ್ಲಿ ಮಳವಳ್ಳಿಯ ಸಿಂಹಾಸನಕ್ಕೆ (ಮಠ) ಕರ್ತರಾದ ನಿಲವಂದ ದೇವರಿಗೆ ಹದಿನಾಡ ಸೀಮೆಯ ಚಾಮರಸಗಾವುಂಡರು ಹೊಂಡರಬಾಳು ಗ್ರಾಮವನ್ನು ದಾನವಾಗಿ ನೀಡಿದರೆಂದು ಪ್ರಸ್ತಾಪಿಸಿದೆ. ಹೊಂಡರಬಾಳು ಗ್ರಾಮಕ್ಕೂ ಮಳವಳ್ಳಿ ಮಠಕ್ಕೂ ನಿಕಟ ಸಂಬಂದವಿದ್ದಂತೆ ತೋರುತ್ತದೆ. ಶಿವನಸಮುದ್ರ ಕ್ರಿ.ಶ.1604ರ ಶಾಸನದಲ್ಲಿ ಹದಿನಾಡಪ್ರಭು ತಿರುಮಲನಾಯಕರು ಸುಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇಸಾಯಿಗರು ಆಚರಿಸುವ ಅತಿಥಿ ಮಹತ್ವಗಳಿಗೆ ಶಿವನಸಮುದ್ರದ ವೀರೇಶ್ವರನ ಗುಡಿಯನ್ನು ಮಹಾಮತ್ತಿನ ಮಠವ ಮಾಡಿ ಆ ಮಠಕ್ಕೆ ಭೂಮಿಯನ್ನು ಹಾಗೂ ಗ್ರಾಮಗಳನ್ನು ದಾನ ನೀಡಿರುವ ವಿಷಯವಿದೆ. ಮುಡಿಗೊಂಡ ಕ್ರಿ.ಶ.1666ರ ಶಾಸನ ಹೊಂಡರಬಾಳು ಸಿಂಹಾಸನಕ್ಕೆ ಶಿವರಾತ್ರಿ ಹಬ್ಬದಲ್ಲಿ ವಸ್ತ್ರ ಧರಿಸಲು ವಿಜಯಪುರದ ಪರಮ ಒಡೆಯರು ಹಾಗೂ ಅವರ ಮಕ್ಕಳು ಮತ್ತು ಅವರ ಹೆಂಡತಿ ಚಿನ್ನಮ್ಮನವರು ಹಣವನ್ನು ದಾನ ಮಾಡಿದ್ದಾರೆ. ಹೀಗೆ, ಕೊಳ್ಳೇಗಾಲ ಪ್ರದೇಶದಲ್ಲಿ ಶೈವಧರ್ಮ ಪ್ರಾಚೀನ ಕಾಲದಲ್ಲಿ ರಾಜಾಶ್ರಯವನ್ನು ಪಡೆದಿರುವುದು ಇಲ್ಲಿ ದೊರೆತ ಶಾಸನಗಳಿಂದ ಮಾಹಿತಿಯನ್ನು ಕಲೆಹಾಕಲಾಗಿದೆ.

## ಪರಾಮರ್ಶನ ಗ್ರಂಥಗಳು


1. ಡಾ.ಅಂಬಳಿಕೆ ಹಿರಿಯಣ್ಣ,(ಸಂ), ಕನ್ನಡ ವಿಷಯ ವಿಶ್ವಕೋಶ – ಇತಿಹಾಸ ಮತ್ತು ಪುರಾತತ್ವ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು,2009
2. ಪ್ರೊ.ಅರವಿಂದ ಮಾಲಗತ್ತಿ,(ಸಂ), ಕನ್ನಡ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,
3. ಡಾ.ಎಂ.ಚಿದಾನಂದ ಮೂರ್ತಿ,ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಸಾ.ಶ 450–1150)
4. ಡಾ.ತಿಪ್ಪೇರುದ್ರಸ್ವಾಮಿ, ಹೆಚ್., ಅವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'(2013).
5. ಹಿರೇಮಠ, ಎಸ್.ಎಂ., ಶಾಸನಾಧ್ಯಯನ, 1998
6. ಕಡಪಟ್ಟಿ, ಎಂ.ಎನ್., ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ
7. ವಸಂತಲಕ್ಷ್ಮಿ, ಕೆ., ಕರ್ನಾಟಕದ ಶೈವ ಶಿಲ್ಪಗಳು, 2008
8. ಹಾ.ಮಾ.ನಾಯಕ್–ಎಪಿಗ್ರಾಫಿಯಾಕರ್ನಾಟಿಕ–ಸಂಪುಟ–4,ಕೊಳ್ಳೇಗಾಲ ತಾಲೋಕಿನ ಶಾಸನಗಳು